ದಿ:12/08/2025
156ನೇ ಅಧಿವೇಶನ ನಿ-330= (26)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 26 ಕ್ಕೆ ಉತ್ತರ.**

*****

**ಪ್ರಶ್ನೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ವಶಪಡಿಸಿಕೊಳ್ಳಲಾದ ಜಮೀನು ಸರ್ಕಾರಿ ಮತ್ತು ಖಾಸಗಿ ಜಮೀನಿನಿಂದ ಕೂಡಿದ್ದು, ಭೂ ವ್ಯವಹಾರಗಳು ಸಂಕೀರ್ಣ ಕಂದಾಯ ದಾಖಲೆಗಳ ಪರಿಶೋಧನೆಯನ್ನು ಒಳಗೊಂಡಿರುವುದರಿಂದ ಕಂದಾಯ ಮತ್ತಿತರ ದಾಖಲೆಗಳ ಆಧಾರದ ಮೇಲೆ ಜಮೀನಿನ ಹಕ್ಕನ್ನು ಸ್ಥಾಪಿಸುವುದು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಯಾರ ಜಮೀನು ಮಂಡಳಿಯಿಂದ ವಶಪಡಿಸಿಕೊಳ್ಳಲ್ಪಟ್ಟಿತೋ ಆ ವ್ಯಕ್ತಿಗಳು ಪರಿಹಾರವನ್ನು ಕೋರುವುದಕ್ಕಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳಿಂದ ತಯಾರಿಸಲಾದ ಪಟ್ಟಿಯ ಪ್ರಕಾರ ದಾಖಲೆಗಳನ್ನು ಸಲ್ಲಿಸಬೇಕು. ಅರ್ಜಿದಾರರಿಂದ ಈ ಪಟ್ಟಿಗಳ ಪ್ರಕಾರ ಸ್ವೀಕರಿಸಲಾದ ದಾಖಲೆಗಳ ಪರಿಶೀಲನೆಯ ನಂತರ ವಿಶೇಷ ಭೂಸ್ವಾಧೀನಾಧಿಕಾರಿಗಳು ಕೋರಿಕೆಗಳನ್ನು ಸಂಸ್ಕರಿಸಿ ಅರ್ಜಿದಾರರಿಗೆ ಪರಿಹಾರವನ್ನು ಬಟಾವಾಡೆ ಮಾಡುವರು. ಆದರೆ ಭೂಪರಿಹಾರ ಪಾವತಿಗಳ ಪರಿಶೀಲನೆಯ ಪ್ರಕಾರ ತಿಳಿದುಬಂದಿದ್ದೇನೆಂದರೆ, ಭೂಪರಿಹಾರದ ಕಡೆಗೆ ರೂ.79.29 ಕೋಟಿಯನ್ನು ಪಾವತಿ ಮಾಡುವಾಗ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಉಲ್ಲಂಘನೆಗಳಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಮಂಡಳಿಯಿಂದ ಜಮೀನಿನ ಸ್ಥಿತಿಯ ಪರಿಶೀಲನೆಯಾಗದ ಕಾರಣದಿಂದ, ರೂ.1.84 ಕೋಟಿ ತಪ್ಪು ಪಾವತಿಯಲ್ಲಿ ಪರಿಣಮಿಸುವಂತೆ, ಒಂದೇ ಜಮೀನಿಗೆ ಸಾಕಷ್ಟು ಭಾರಿ ಭೂ ಪರಿಹಾರದ ಪಾವತಿ ಮಾಡಲಾಗಿದ್ದು, ಈ ರೀತಿಯ ಪ್ರಕರಣಗಳು ಸಾಕಷ್ಟು ಕಡೆ ಕಂಡು ಬಂದಿರುತ್ತದೆ. ಭೂಪರಿಹಾರ ಪಾವತಿಯನ್ನು ಬಟವಾಡೆ ಮಾಡುವಾಗ ಆದ ಲೋಪಗಳು ಸಾಕಷ್ಟಿವೆ. ಈ ಎಲ್ಲಾ ವಿಚಾರಗಳ ಕುರಿತಾಗಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಬಳಿ ಪ್ರಸ್ತಾಪಿಸಲು ಅನುಮತಿ ನೀಡುವಂತೆ ಕೋರುತ್ತೇನೆ.

**ಉತ್ತರ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಜಮೀನುಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಕಾರ್ಯಪಾಲಕ ಅಭಿಯಂತರರು, ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಪ್ರಾಥಮಿಕ ಅಧಿಸೂಚನೆ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಿ ನಿಯಮಾನುಸಾರ ದರ ನಿಗದಿಪಡಿಸಿ ಸಂಬಂಧಪಟ್ಟ ಭೂಮಾಲೀಕರುಗಳಿಗೆ ಕಂದಾಯ ದಾಖಲೆಗಳನ್ವಯ ಜಮೀನಿನ ಮಾಲೀಕತ್ವದ ಅನುಸಾರ ಪರಿಹಾರ ವಿತರಣೆ ಮಾಡಲಾಗುತ್ತದೆ.

ಸ್ವಾಧೀನಪಡಿಸಿದ ಜಮೀನುಗಳ ಮಾಲೀಕರುಗಳಿಗೆ ತಮ್ಮ ಜಮೀನುಗಳ ಮಾಲೀಕತ್ವವನ್ನು ಧೃಡಪಡಿಸುವ ಬಗ್ಗೆ ನಿರ್ದಿಷ್ಟಪಡಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಸಂಬಂಧಪಟ್ಟ ವಿಶೇಷ ಭೂಸ್ವಾಧೀನಾಧಿಕಾರಿಗಳು ಭೂಮಾಲೀಕರುಗಳಿಗೆ ನೋಟೀಸ್ ನ್ನು ನೀಡಿ ಸ್ವಾಧೀನಪಡಿಸಿದ ಜಮೀನುಗಳ ಹಕ್ಕನ್ನು ಖಾತರಿಪಡಿಸುವ ಕಂದಾಯ ದಾಖಲೆಗಳೊಂದಿಗೆ, ಭೂಮಾಲೀಕರುಗಳ ಗುರುತನ್ನು ನಿರ್ದಿಷ್ಟಪಡಿಸುವ ದಾಖಲೆಗಳಾದ ಆಧಾರ್ ಕಾರ್ಡ್, ಬ್ಯಾಂಕ್ ಖಾತೆಗಳ ವಿವರ, ಭೂಮಾಲೀಕರುಗಳ ಭಾವಚಿತ್ರ, ಮತ್ತಿತರೆ ಅವಶ್ಯ ದಾಖಲೆಗಳನ್ನು ಪಡೆಯಲಾಗುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು ಭೂಪರಿಹಾರ ವಿತರಣೆಯ ಅಧಿಕಾರಿಗಳಾಗಿದ್ದು, ಸ್ವಾಧೀನಪಡಿಸಿದ ಜಮೀನುಗಳ ಪ್ರಾಥಮಿಕ ಅಧಿಸೂಚನೆ ಹಾಗೂ ಅಂತಿಮ ಅಧಿಸೂಚನೆಯನ್ವಯ ಭೂಮಾಲೀಕರುಗಳಿಗೆ ಸದರಿಯವರ ವಿಸ್ತೀರ್ಣದ ಜಮೀನಿನ ಸೂಕ್ತ ದಾಖಲೆಗಳನ್ನು ಪಡೆದು ಹಕ್ಕನ್ನು ಹಾಗೂ ಅನುಭವದಲ್ಲಿರುವ ವಿಸ್ತೀರ್ಣವನ್ನು ಧೃಢಪಡಿಸಿಕೊಂಡು ಭೂಮಾಲೀಕರು ಒಪ್ಪಿದಲ್ಲಿ ಒಪ್ಪಂದದ ಐತೀರ್ಪಿನ ಮೊತ್ತವನ್ನು ಹಾಗೂ ಭೂಮಾಲೀಕರು ಸದರಿ ಒಪ್ಪಂದದ ಐತೀರ್ಪಿನ ಮೊತ್ತವನ್ನು ಒಪ್ಪದೇ ಇದ್ದಲ್ಲಿ ಅಥವಾ ಯಾವುದೇ ನ್ಯಾಯಾಲಯದ ವ್ಯಾಜ್ಯಗಳಿದ್ದಲ್ಲಿ ನಿಯಮಾನುಸಾರ ಸಾಮಾನ್ಯ ಐತೀರ್ಪನ್ನು ರಚಿಸಿ ನ್ಯಾಯಾಲಯಕ್ಕೆ ಠೇವಣಿ ಮಾಡಲಾಗುತ್ತದೆ.

ಆದಾಗ್ಯೂ, ಮಂಡಳಿಯು ಸ್ವಾಧೀನಪಡಿಸಿದ ಕೆಲವು ಯೋಜನಾ ಪ್ರದೇಶಗಳ ಪರಿಹಾರ ವಿತರಣೆಯಲ್ಲಿ ಲೋಪಗಳು ಉಂಟಾಗಿರುವುದು ಕಂಡುಬಂದಿದ್ದು ಅಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ವಿಶೇಷ ಭೂಸ್ವಾಧೀನಾಧಿಕಾರಿಗಳ ಮೇಲೆ ಶಿಸ್ತು ಕ್ರಮಕ್ಕೆ ಶಿಫಾರಸ್ಸಿನೊಂದಿಗೆ ಪ್ರಥಮ ವರ್ತಮಾನ ವರದಿ (FIR) ಯನ್ನು ಭೂಪರಿಹಾರ ಪಡೆದ ಹಾಗೂ ನೀಡಿದ ವ್ಯಕ್ತಿಗಳ / ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ದಾಖಲಿಸುವುದು ಹಾಗೂ ಕೂಡಲೇ ಈಗಾಗಲೇ ವಿತರಿಸಿದ ಭೂಪರಿಹಾರವನ್ನು ಹಿಂಪಡೆಯುವ ಬಗ್ಗೆ ನ್ಯಾಯಾಲಯದಲ್ಲಿ ರಿಕವರಿ ಸೂಟ್‌ನ್ನು ದಾಖಲಿಸುವುದು, ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದರಿಂದ ಗಮನಾರ್ಹ ಪ್ರಮಾಣದಲ್ಲಿ ಈ ತರಹದ ಪ್ರಕರಣಗಳು ಕಡಿಮೆಯಾಗಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿ ಧಾರವಾಡ ರವರ ವ್ಯಾಪ್ತಿಯ ಕೆಲಗೇರಿ, ಮಮ್ಮಿಗಟ್ಟಿ, ಕೋಟೂರು, ಬೇಲೂರು ಇತ್ಯಾದಿ ಕೈಗಾರಿಕಾ ಪ್ರದೇಶಗಳಲ್ಲಿ ಒಂದೇ ಜಮೀನಿಗೆ ಎರಡು ಬಾರಿ ಪರಿಹಾರ ವಿತರಣೆಯಾಗಿರುವ ಪ್ರಕರಣ ಬೆಳಕಿಗೆ ಬಂದಿದ್ದು, ಈ ಬಗ್ಗೆ ಮಂಡಳಿಯಿಂದ ತನಿಖೆ ನಡೆಸಿರುವಂತೆ ಮೇಲ್ನೋಟಕ್ಕೆ ಒಟ್ಟು ಮೊಬಲಗು ರೂ.19,99,55,000/- ಗಳ ಎರಡನೇ ಬಾರಿ ಹೆಚ್ಚುವರಿಯಾಗಿ ಪರಿಹಾರ ಪಾವತಿಸಿರುವುದು ಕಂಡುಬಂದಿದ್ದು, ಆ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದ ಮೇಲೆ ಪ್ರಕರಣ ದಾಖಲಾಗಿ ಸದರಿಯವರಿಗೆ ಸೆರೆವಾಸ ಶಿಕ್ಷೆ ವಿಧಿಸಲಾಗಿರುತ್ತದೆ ಹಾಗೂ ಸದರಿ ಪ್ರಕರಣದ ವಿಚಾರಣೆಯು ಸಹ ಚಾಲ್ತಿಯಲ್ಲಿರುತ್ತದೆ. ಮುಂದುವರೆದು, ಒಂದೇ ಜಮೀನಿಗೆ ಎರಡನೇ ಬಾರಿ ಪರಿಹಾರ ಪಾವತಿಸಿರುವ ಮೊತ್ತವನ್ನು ಹಿಂಪಡೆಯುವ (ರಿಕವರಿ) ಪ್ರಕ್ರಿಯೆ ಕೂಡ ಚಾಲ್ತಿಯಲ್ಲಿದ್ದು ಸದರಿ ಪ್ರಕರಣ ಮೇಲೆ ಜಾರಿ ನಿರ್ದೇಶನಾಲಯವು (ED) ಸಹ ತನಿಖೆ ನಡೆಸಿರುತ್ತದೆ.

ಮುಂದುವರೆದು, ರಾಮನಗರ ಜಿಲ್ಲೆ ವ್ಯಾಪ್ತಿಯ ಬನ್ನಿಕುಪ್ಪೆ ಗ್ರಾಮದಲ್ಲಿಯೂ ಸಹ ಒಟ್ಟು ಮೊಬಲಗು ರೂ.1,58,00,000/- ಗಳು ಎರಡನೇ ಬಾರಿ ಪರಿಹಾರ ಪಾವತಿಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ. ಹಿಂದೆ ಸಣ್ಣ ನೀರಾವರಿ ಇಲಾಖೆಯಿಂದ ಸ್ವಾಧೀನಪಡಿಸಿ ಪರಿಹಾರ ವಿತರಿಸಿದ ಜಮೀನನ್ನು ಸದರಿ ಇಲಾಖೆಯು ಅಧಿಸೂಚಿತ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೇ ಇರುವುದರಿಂದ ಹಾಗೂ ಈ ಬಗ್ಗೆ ಕಂದಾಯ ದಾಖಲೆಗಳಲ್ಲಿ **"ಸಣ್ಣ ನೀರಾವರಿ ಇಲಾಖೆಯಿಂದ ಭೂಸ್ವಾಧೀನ"** ಎಂದು ನಮೂದಾಗದೇ ಇದ್ದುದರಿಂದ ಹಾಗೂ ಮಂಡಳಿಯ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗಾಗಿ ಸ್ವಾಧೀನಪಡಿಸಿದ ಜಮೀನಿನ ವ್ಯಾಪ್ತಿಯಲ್ಲಿ ಬಂದಿದ್ದರಿಂದ ಈ ಹಿಂದೆ ಪರಿಹಾರ ವಿತರಿಸಿದ ಜಮೀನಿಗೆ ಮತ್ತೊಮ್ಮೆ ಪರಿಹಾರ ವಿತರಣೆಯಾಗಿರುತ್ತದೆ.

ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿ, ಮಾನ್ಯ ನ್ಯಾಯಾಲಯದ ಆದೇಶದಂತೆ ಎರಡನೇ ಬಾರಿ ಪರಿಹಾರ ಪಡೆದ ಭೂಮಾಲೀಕರು ರೂ.75.00 ಲಕ್ಷವನ್ನು ಪ್ರಾರಂಭಿಕವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಠೇವಣಿಕರಿಸಿರುತ್ತಾರೆ. ಉಳಿದಂತೆ ಬಾಕಿ ಉಳಿದ ಮೊಬಲಗನ್ನು ಮರು ಪಾವತಿ ಪಡೆಯುವ ಬಗ್ಗೆ ಆರ್.ಎಫ್.ಎ. 675, 676 ಮತ್ತು 677/2019 ರಂತೆ ಪ್ರಕರಣ ಅಂತಿಮ ಆದೇಶ ಹೊರಡಿಸಲು ಬಾಕಿ ಇರುತ್ತದೆ ಹಾಗೂ ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಶಿಫಾರಸ್ಸು ಮಾಡಲಾಗಿದೆ.

ಈ ತರಹ ಸಂದರ್ಭಗಳು ಉದ್ಭವವಾಗದಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಪರಿಹಾರ ವಿತರಣೆಯ ಸಂದರ್ಭಗಳಲ್ಲಿ ಜಾಗರೂಕತೆಯಿಂದ ಯಾವುದೇ ತಪ್ಪಿಗೆ ಅವಕಾಶವಿಲ್ಲದಂತೆ ಪರಿಹಾರ ವಿತರಣೆ ಮಾಡಲು ಹಲವಾರು ಸುತ್ತೋಲೆಗಳ ಮೂಲಕ, ಪ್ರತಿ ಯೋಜನಾ ಅನುದಾನ ಬಿಡುಗಡೆ ಪತ್ರಗಳಲ್ಲಿಯೂ ಸಹ ಹಾಗೂ ಹಲವಾರು ಸಭೆಗಳಲ್ಲಿ ಹಾಗೂ ಪ್ರಗತಿ ಪರಿಶೀಲನಾ ಸಭೆಗಳಲ್ಲಿಯೂ ಸಹ ಸೂಚಿಸಲಾಗಿರುತ್ತದೆ.

**ಸಂಖ್ಯೆ: ಸಿಐ 447 ಐಎಪಿ 2025**

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು